# ಹೊಸತು

## ಫೋರ್‌ಸೆವೆನ್ ಸಂಗ್ರಹ



ಸೌಂದರ್ಯ ಆಭರಣಗಳ ತಯಾರಿಕಾ ಸಂಸ್ಥೆ ಫೋರ್‌ಸೆವೆನ್ ಪ್ರೇಮಿಗಳ ದಿನದಂದು ಉಡುಗೊರೆ ನೀಡಲು ಸೂಕ್ತವಾದ ಸಂಗ್ರಹವನ್ನು ಹೊರತಂದಿದೆ.

ಹೃದಯಾಕಾರದ ಪೆಂಡೆಂಟ್‌ಗಳು, ಬ್ರೇಸ್‌ಲೆಟ್, ಕೀ ಚೈನ್, ಕಿವಿಯೋಲೆಗಳು ಈ ಸಂಗ್ರಹದಲ್ಲಿವೆ. ಉಡುಗೊರೆ ನೀಡುವ ಮೂಲಕ ನಿಮ್ಮ ಪ್ರೀತಿಯನ್ನು ವ್ಯಕ್ತಪಡಿಸಿ ಎಂದು ಕಂಪೆನಿ ಹೇಳಿದೆ. ಹ್ಯಾಂಡಿಕ್ರಾಫ್ಟ್ ಆಭರಣ ಫೋರ್‌ಸೆವೆನ್‌ನ ವೈಶಿಷ್ಟ್ಯ. ಆಕರ್ಷಕ ವಿನ್ಯಾಸಗಳ ಆಯ್ಕೆ ಇಲ್ಲಿದೆ.

ಮಾಹಿತಿಗೆ : 9873870318

www.fourseven.in

## ಯುರೇಕಾ ಫೋರ್ಬ್ಸ್‘ಯುರೋವಿವ’



ಯುರೇಕಾ ಫೋರ್ಬ್ಸ್ ಇದೀಗ ಆರೋಗ್ಯಕರ ಅಡುಗೆಗಾಗಿ ಯುರೋವಿವ ಸರಣಿಯ ಪಾತ್ರೆಗಳನ್ನು ಮಾರುಕಟ್ಟೆಗೆ ಪರಿಚಯಿಸಿದೆ. ಸ್ಟೀಲ್, ಅಲ್ಯುಮಿನಿಯಮ್ ಮತ್ತು ತಾಮ್ರ ಲೋಹದ ಮಿಶ್ರಣದಿಂದ ಇದನ್ನು ತಯಾರಿಸಲಾಗಿದ್ದು, ಉತ್ತಮ ಬಾಳಿಕೆ ಬರುತ್ತದೆ ಮತ್ತು ಅಡುಗೆ ಕೂಡಾ ಬೇಗನೆ ತಯಾರಾಗುತ್ತದೆ ಎಂದು ಕಂಪೆನಿ ಹೇಳಿದೆ. ಇದರಿಂದ ಗ್ಯಾಸ್ ಮತ್ತು ವಿದ್ಯುತ್ ಕೂಡಾ ಉಳಿತಾಯವಾಗುತ್ತದೆ. ಬೇಗನೆ ಬಿಸಿಯಾಗುವುದರಿಂದ ಕಡಿಮೆ ಅಡುಗೆ ಎಣ್ಣೆ ಸಾಕಾಗುತ್ತದೆ.

ಮಾಹಿತಿಗೆ : 9900594594

## ಫಾರೆವರ್‌ಮಾರ್ಕ್ ವಜ್ರಾಭರಣ



ಪ್ರಿಯತಮನಿಗೆ ಮತ್ತು ಪ್ರಿಯತಮೆಗೆ ಪ್ರೇಮಿಗಳ ದಿನದಂದು ವಜ್ರಾಭರಣ ಉಡುಗೊರೆ ಕೊಡಲು ಬಯಸುವವರಿಗಾಗಿ ಫಾರೆವರ್‌ಮಾರ್ಕ್ ವ್ಯಾಲೆಂಟೈನ್ ಸಂಗ್ರಹ ಮಾರುಕಟ್ಟೆಗೆ ಪರಿಚಯಿಸಿದೆ.

ಆಕರ್ಷಕ ವಿನ್ಯಾಸದ ಹೃದಯಾಕಾರದ ವಜ್ರಾಭರಣಗಳು ಈ ಸಂಗ್ರಹದಲ್ಲಿವೆ. ಬಳೆ, ಪೆಂಡೆಂಡ್‌ಗಳು, ಕಿವಿಯೋಲೆ ಮತ್ತು ಉಂಗುರಗಳು ಇದರ ವಿಶೇಷ. ಪ್ರೇಮಿಗೆ ಕೊಡುವ ಉಡುಗೊರೆಯು ಪ್ರೀತಿಯನ್ನು ಸದಾ ಹಸಿರಾಗಿಡುತ್ತದೆ ಎನ್ನುತ್ತದೆ ಕಂಪೆನಿ.

ವಿವರಗಳಿಗೆ: www.forvermark.com/en-IN

## ಫಿಲಿಪ್ಸ್ ಸೂಪ್‌ಮೇಕರ್




ಗೃಹೋತ್ಪನ್ನಗಳ ತಯಾರಿಕ ಸಂಸ್ಥೆ ಫಿಲಿಪ್ಸ್ ಹೊಸ ಮಾದರಿಯ ಸೂಪ್‌ಮೇಕರ್ ಬಿಡುಗಡೆ ಮಾಡಿದೆ. ರುಚಿಕರ ಮತ್ತು ಆರೋಗ್ಯಕರ ಸೂಪ್ ತಯಾರಿಸಲು ಇದು ಉತ್ತಮ ಆಯ್ಕೆ, ಕೆಲವೇ ನಿಮಿಷಗಳಲ್ಲಿ ಇದರಿಂದ ಸೂಪ್ ತಯಾರಿಸಲು ಸಾಧ್ಯ ಎಂದು ಕಂಪೆನಿ ಹೇಳಿದೆ. ದೀರ್ಘಕಾಲ ಬಾಳಿಕೆ ಬರುವ ಗುಣಮಟ್ಟದ ಉಪಕರಣ ಬಳಸಿ ಇದನ್ನು ತಯಾರಿಸಲಾಗಿದೆ. ಜಗ್ ರೂಪದ ಇದು ಬಳಸಲು ಸರಳವಾಗಿದ್ದು, ಕೊಂಡೊಯ್ಯಲು ಕೂಡಾ ಸುಲಭ.

ಬೆಲೆ 9990 ರೂಪಾಯಿ.

ಮಾಹಿತಿಗೆ : 9845706155

## ವಿಡಿಯೋಕಾನ್ ಡಿಟಿಹೆಚ್




ಎಲೆಕ್ಟ್ರಾನಿಕ್ ಉತ್ಪನ್ನಗಳ ತಯಾರಿಕಾ ಸಂಸ್ಥೆ ವಿಡಿಯೋಕಾನ್ ಇದೀಗ 4K ಹೆಚ್‌ಡಿ ಡಿಟಿಹೆಚ್ ಬಿಡುಗಡೆ ಮಾಡಿದೆ. ಇದು ಹೆಚ್‌ಡಿಗಿಂತ ನಾಲ್ಕು ಪಟ್ಟು ಹೆಚ್ಚು ಉತ್ತಮ ಗುಣಮಟ್ಟದ ದೃಶ್ಯ ಮತ್ತು ಧ್ವನಿ ಹೊಂದಿದ್ದು, ಭಾರತೀಯ ಪ್ರಾಂತೀಯ ಭಾಷೆಗಳನ್ನು ಅಳವಡಿಸಲಾಗಿದೆ. ಯುಎಸ್‌ಬಿ ಸಂಪರ್ಕದ ಸೌಲಭ್ಯವಿದೆ. ಬೆಲೆ 6590 ರೂಪಾಯಿ.

ಮಾಹಿತಿಗೆ: www.videocond2h.com

## ಕೆನಾನ್ ಡಿಜಿಟಲ್ ಕ್ಯಾಮೆರಾ




ಕ್ಯಾಮೆರಾ ತಯಾರಿಕೆಯಲ್ಲಿ ಪ್ರಸಿದ್ಧವಾದ ಕೆನಾನ್ ತನ್ನ ಡಿಜಿಟಲ್ ಕ್ಯಾಮೆರಾ ಸರಣಿಯಲ್ಲಿ ಪವರ್‌ಶಾಟ್ SX530 ಮಾದರಿಯನ್ನು ಹೊರತಂದಿದೆ. ತನ್ನ ವರ್ಗದಲ್ಲಿ ಅತ್ಯುತ್ತಮವಾದ 50X ಆಪ್ಟಿಕಲ್ ಝೂಮ್ ಇದ್ದು, 16 ಮೆಗಾಪಿಕ್ಸೆಲ್ ಲೆನ್ಸ್, 3 ಇಂಚಿನ ಎಲ್‌ಸಿಡಿ ತೆರೆ ಮತ್ತು 32 ಜಿಬಿಯವರೆಗೆ ವಿಸ್ತರಿಸಬಹುದಾದ ಮೆಮೊರಿ ಸೌಲಭ್ಯ ಹೊಂದಿದೆ. ಹೆಚ್ಚು ದೂರದ ದೃಶ್ಯಗಳನ್ನು ಸ್ಪಷ್ಟವಾಗಿ ಇದು ಸೆರೆಹಿಡಿಯುತ್ತದೆ ಎಂದು ಕಂಪೆನಿ ಹೇಳಿದೆ.

ಬೆಲೆ 20,799 ರೂಪಾಯಿ.

ವಿವರಗಳಿಗೆ: www.canon.co.on